## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಾರ್ವಜನಿಕರ ವಿತರಣೆಗಾಗಿ ಅರಣ್ಯ ಇಲಾಖೆಯಿಂದ ಬೆಳೆಸಲಾದ ಸಸಿಗಳಿಗೆ ಮಾರಾಟ ಮಾಡಲು ದರ ನಿಗಧಿಪಡಿಸುವ ಕುರಿತು

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಅಪಜೀ 131 ಎಫ್‌ಎಪಿ 2008, ದಿನಾಂಕ 25-02-2009

2) ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯ ಮಾರ್ಗಸೂಚಿ ಪತ್ರ ಸಂಖ್ಯೆ: ಅಪಜೀ 85 ಎಫ್‌ಎಪಿ 2011, ದಿನಾಂಕ: 09-06-2011.

3) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಪತ್ರ ಸಂಖ್ಯೆ: B1/BUD/Seedling Distn/Others/2006-07, ದಿನಾಂಕ: 22-06-2011 ಮತ್ತು 13-09-2011.

****

**ಪ್ರಸ್ತಾವನೆ:**

ಅರಣ್ಯ ಇಲಾಖೆಯಲ್ಲಿ ಬೆಳೆಸಿದ ಸಸಿಗಳನ್ನು 2008-09ನೇ ಸಾಲಿನಿಂದ ರೈತರಿಗೆ ರಿಯಾಯಿತಿ ದರದಲ್ಲಿ ಮಾರಾಟ ಮಾಡಲು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ: 25-02-2009 ರ ಆದೇಶದಲ್ಲಿ ಈ ಕೆಳಕಂಡ ದರಗಳನ್ನು ನಿಗಧಿಪಡಿಸಲಾಗಿದೆ.

| ಕ್ರ. ಸಂ. | ಸಸಿಗಳನ್ನು ಬೆಳೆಸಿರುವ ಪಾಲಿಥೀನ್ ಚೀಲಗಳ ಗಾತ್ರ | 2008-09ನೇ ಸಾಲಿನಿಂದ ರೈತರಿಗೆ ಮಾರಾಟ ಮಾಡುವ ರಿಯಾಯತಿ ದರ |
|---|---|---|
| 1 | 4" x 6" | ರೂ.1.00/ಪ್ರತಿ ಸಸಿಗೆ |
| 2 | 5" x 8" | ರೂ.1.50/ಪ್ರತಿ ಸಸಿಗೆ |
| 3 | 8" x 12" | ರೂ.3.00/ಪ್ರತಿ ಸಸಿಗೆ |

ಮೇಲೆ ಓದಲಾದ ಕ್ರಮ ಸಂಖ್ಯೆದ (2)ರ ದಿನಾಂಕ 09-06-2011ರಂದು ಹೊರಡಿಸಲಾದ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯ ಮಾರ್ಗಸೂಚಿಗಳಲ್ಲಿ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಲ್ಲಿ ಈ ಕೆಳಕಂಡಂತೆ ರಿಯಾಯಿತಿ ದರದಲ್ಲಿ ಸಸಿಗಳನ್ನು ಮಾರಾಟ ಮಾಡಲು ತಿಳಿಸಿದೆ.

| ಸಸಿಗಳನ್ನು ಬೆಳೆಸಿರುವ ಪಾಲಿಥೀನ್ ಚೀಲಗಳ ಗಾತ್ರ | ಮಾರಾಟ ದರ |
|---|---|
| 5" x 8" / 6" x9" | ರೂ.1.00/ಪ್ರತಿ ಸಸಿಗೆ |
| 8" x 12" | ರೂ.3.00/ಪ್ರತಿ ಸಸಿಗೆ |
| 10" x 16" / 14" x 20" | ರೂ.5.00/ಪ್ರತಿ ಸಸಿಗೆ |

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ದಿನಾಂಕ: 22-06-2011 ಮತ್ತು 13-09-2011 ರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಪತ್ರಗಳಲ್ಲಿ 2011-12ನೇ ಸಾಲಿನಿಂದ ಎಲ್ಲಾ ಯೋಜನೆಗಳಡಿಯಲ್ಲಿಯೂ ಸಾರ್ವಜನಿಕ ವಿತರಣೆಗಾಗಿ ಬೆಳೆಸಿದ ಸಸಿಗಳ ರಿಯಾಯಿತಿ ದರಗಳನ್ನು ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ನಿಗಧಿಪಡಿಸಿರುವ ದರವನ್ನೇ ನಿಗಧಿಪಡಿಸಲು ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ. ಅದರಂತೆ ಈ ಆದೇಶ.

## ಸರ್ಕಾರಿ ಆದೇಶ ಸಂಖ್ಯೆ: ಅಪಜೀ 184 ಎಫ್‌ಎಪಿ 2011, ಬೆಂಗಳೂರು, ದಿನಾಂಕ: 02-11-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ, 2011-12ನೇ ಸಾಲಿನಿಂದ ಅರಣ್ಯ ಇಲಾಖೆಯ ಎಲ್ಲಾ ಯೋಜನಡಿಗಳಡಿಯಲ್ಲಿ ಬೆಳೆಸಿದಂತಹ ಸಸಿಗಳನ್ನು ಸಾರ್ವಜನಿಕ

ವಿತರಣೆಗಾಗಿ ಈಗಾಗಲೇ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ನಿಗಧಿ ಪಡಿಸಿರುವ ಈ ಕೆಳಕಂಡ ದರವನ್ನೇ ನಿಗಧಿಪಡಿಸಿ ಆದೇಶಿಸಿದೆ ಮತ್ತು ಈ ಕೂಡಲೇ ಜಾರಿಗೆ ಬರುವಂತೆ ಸರ್ಕಾರಿ ಆದೇಶ ಸಂಖ್ಯೆ: ಅಪಜೀ 131 ಎಫ್‌ಎಪಿ 2008, ದಿನಾಂಕ: 25-02-2009 ನ್ನು ರದ್ದುಪಡಿಸಿದೆ.

| ಸಸಿಗಳನ್ನು ಬೆಳೆಸಿರುವ ಪಾಲಿಥೀನ್ ಚೀಲಗಳ ಗಾತ್ರ | ಮಾರಾಟ ದರ |
|---|---|
| 5" x 8" / 6" x9" | ರೂ.1.00/ಪ್ರತಿ ಸಸಿಗೆ |
| 8" x 12" | ರೂ.3.00/ಪ್ರತಿ ಸಸಿಗೆ |
| 10" x 16" / 14" x 20" | ರೂ.5.00/ಪ್ರತಿ ಸಸಿಗೆ |

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಅನಧಿಕೃತ ಟಿಪ್ಪಣಿ ಸಂಖ್ಯೆ: ಅಪಜೀ 125 ಆಂಆಸ 2011, ದಿನಾಂಕ: 04-07-2011ರಲ್ಲಿನ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಉಮಾದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

**ಇವರಿಗೆ:**

1) ಮಹಾಲೇಖಪಾಲರು (ಲೆಕ್ಕಪತ್ರ/ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
3) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
4) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಯೋಜನೆ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
5) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಕೇಂದ್ರಸ್ಥಾನ ಮತ್ತು ಸಮನ್ವಯ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
6) ಆಂತರಿಕ ಆರ್ಥಿಕ ಸಲಹೆಗಾರರು, ಅಪಜೀ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-5), ವಿಧಾನಸೌಧ, ಬೆಂಗಳೂರು.
7) ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ(ಅರಣ್ಯ)/ಉಪ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು/ ಆಪ್ತ ಸಹಾಯಕರು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.
8) ಶಾಖಾ ರಕ್ಷಾ ಕಡತ.